# ಕರ್ನಾಟಕ ವಿಧಾನ ಪರಿಷತ್ತು

| | |
|---|---|
| ವಿಧಾನ ಪರಿಷತ್ತಿನ ಸದಸ್ಯರು: | ಶ್ರೀ ಸುನೀಲ್ ಸುಬ್ರಮಣಿ.ಎಂ.ಪಿ |
| ಚುಕ್ಕೆ ಗುರುತಿಲ್ಲದ ಪ್ರಶ್ನೆ: | 608 |
| ಉತ್ತರಿಸಬೇಕಾದ ದಿನಾಂಕ: | 11.03.2020 |
| ಯತ್ತರಿಸುವ ಸಚಿವರು: | ಶ್ರೀ ವಿ ಸೋಮಣ್ಣ, ವಸತಿ ಸಚಿವರು |

| ಕ್ರ.ಸ | ಪ್ರಶ್ನೆ | ಉತ್ತರ |
|---|---|---|
| ಅ. | ಕಳೆದ ಎರಡು ವರ್ಷಗಳಲ್ಲಿ ಕೊಡಗು ಜಿಲ್ಲೆಗೆ ವಸತಿ ಇಲಾಖೆಯಿಂದ ವಿವಿಧ ಯೋಜನೆಗಳಲ್ಲಿ ನೀಡಲಾದ ಮನೆಗಳ ಸಂಖ್ಯೆ ಎಷ್ಟು; ಇವುಗಳಲ್ಲಿ ಸಾಮಾನ್ಯ ಮತ್ತು ಪರಿಶಿಷ್ಟ ಜಾತಿ ಮತ್ತು ಪಂಗಡಗಳಿಗೆ ಪ್ರತ್ಯೇಕ ವಿವರ ನೀಡುವುದು; | 2017-18 ಮತ್ತು 2018-2019ನೇ ಸಾಲಿನಲ್ಲಿ ಕೊಡಗು ಜಿಲ್ಲೆಗೆ ವಸತಿ ಇಲಾಖೆಯಿಂದ ವಿವಿಧ ವಸತಿ ಯೋಜನೆಗಳಲ್ಲಿ 3532 ಮನೆಗಳನ್ನು ಹಂಚಿಕೆ ಮಾಡಲಾಗಿರುತ್ತದೆ. ಇವುಗಳಲ್ಲಿ ಸಾಮಾನ್ಯ ವರ್ಗಕ್ಕೆ 2792 ಮನೆಗಳನ್ನು ಪರಿಶಿಷ್ಟ ಜಾತಿ ಮತ್ತು ಪಂಗಡಗಳಿಗೆ 454 ಮನೆಗಳನ್ನು ಹಂಚಿಕೆ ಮಾಡಲಾಗಿರುತ್ತದೆ. ವಿವರ ಈ ಕೆಳಗಿನಂತಿವೆ. |

| ಕ್ರ. ಸಂ | ಯೋಜನೆ | ಸಾಮಾನ್ಯ ವರ್ಗ | ಅಲ್ಪಸಂಖ್ಯಾತರು | ಪರಿಶಿಷ್ಟ ಜಾತಿ ಮತ್ತು ಪಂಗಡ | ಒಟ್ಟು |
|---|---|---|---|---|---|
| 1 | ಬಸವ ವಸತಿ ಯೋಜನೆ | 2675 | 266 | 0 | 2941 |
| 2 | ಡಾ\|\| ಬಿ.ಆರ್. ಅಂಬೇಡ್ಕರ್ ನಿವಾಸ್ ಯೋಜನೆ (ಗ್ರಾ ಮತ್ತು ನ) | 0 | 0 | 450 | 450 |
| 3 | ದೇವರಾಜು ಅರಸು ವಸತಿ ಯೋಜನೆ | 25 | 2 | 4 | 31 |
| 4 | ವಾಜಪೇಯಿ ನಗರ ವಸತಿ ಯೋಜನೆ | 92 | 18 | 0 | 110 |
| | ಒಟ್ಟು | **2792** | **286** | **454** | **3532** |

| ಕ್ರ.ಸ | ಪ್ರಶ್ನೆ | ಉತ್ತರ |
|---|---|---|
| ಆ. | ಕಳೆದ ವರ್ಷದ ಮಳೆಯಿಂದ ಕೊಚ್ಚಿಹೋದ ಗ್ರಾಮಗಳ ಜನರಿಗೆ ಎಷ್ಟು ಮನೆಗಳನ್ನು ಕಟ್ಟಿಸಲಾಗಿದೆ; ಇವುಗಳಲ್ಲಿ ಎಷ್ಟನ್ನು ಫಲಾನುಭವಿಗಳಗೆ ಹಂಚಿಕೆ ಮಾಡಲಾಗಿದೆ;(ವಿವರಗಳನ್ನು ನೀಡುವುದು) | 2018ನೇ ಸಾಲಿನಲ್ಲಿ ಸಂಭವಿಸಿದ ಭೂ ಕುಸಿತ ಹಾಗೂ ಪ್ರಕೃತಿ ವಿಕೋಪದಿಂದ ಮನೆ ಕಳೆದುಕೊಂಡ ಕುಟುಂಬಗಳಿಗೆ ಪುನರ್ ವಸತಿ ಕಲ್ಪಿಸಲು ಸರಕಾರವು 840 ಮನೆಗಳ ನಿರ್ಮಾಣಕ್ಕೆ ಅನುಮೋದನೆ ನೀಡಿರುತ್ತದೆ. ಈ ಪೈಕಿ 741 ಮನೆಗಳು ಪ್ರಾರಂಭಗೊಂಡಿರುತ್ತವೆ. 499 ಮನೆಗಳು ಪೂರ್ಣಗೊಂಡಿದ್ದು, 35 ಮನೆಗಳನ್ನು ಫಲಾನುಭವಿಗಳಿಗೆ ಹಸ್ತಾಂತರಿಸಿದ್ದು, 464 ಮನೆಗಳನ್ನು ಕೂಡಲೇ ಫಲಾನುಭವಿಗಳಿಗೆ ಹಸ್ತಾಂತರಿಸಿಲು ಎಲ್ಲಾ ರೀತಿಯ ಕ್ರಮ ಕೈಗೊಳ್ಳಲಾಗುವುದು. ಇನ್ನುಳಿಗ 242 ಮನೆಗಳು ವಿವಿಧ ಹಂತದ ಪ್ರಗತಿಯಲ್ಲಿರುತ್ತವೆ.<br>ಇದಲ್ಲದೇ ಇನ್ಫೋಸಿಸ್ ಸ್ಥಂಸೆಯವರು 200 ಮನೆಗಳನ್ನು ನಿರ್ಮಿಸುತ್ತಿದ್ದು, ಮನೆಗಳ ನಿರ್ಮಾಣ ಕಾಮಗಾರಿ ಪ್ರಗತಿಯಲ್ಲಿದೆ. |
| ಇ | ಈ ಮನೆಗಳನ್ನು ಕಟ್ಟಲು ಸರ್ಕಾರದಿಂದ ನೀಡಲಾದ ಅನುದಾನ ಎಷ್ಟ ಹಾಗೂ ಜಿಲ್ಲೆಯಲ್ಲಿ ಫಲಾನುಭವಿಗಳಿಗೆ ನೀಡಲಾಗಿರುವ ಸಹಾಯಧನವೆಷ್ಟು? (ವಿವರಗಳನ್ನ ನೀಡುವುದು) | ಬಡಾವಣೆಗಳಿಗೆ ಅಗತ್ಯ ಮೂಲಭೂತ ಸೌಕರ್ಯ ಒಳಗೊಂಡಂತೆ ಮನೆಗಳ ನಿರ್ಮಾಣ ಮತ್ತು ಮೂಲಭೂತ ಸೌಕರ್ಯ ವೆಚ್ಚ ಸೇರಿ ಒಟ್ಟಾರೆ 134.06 ಕೋಟಿಗಳ ಅನುದಾನಕ್ಕೆ ಅನುಮೋದನೆ ನೀಡಲಾಗಿದೆ.<br>ಜಿಲ್ಲೆಯಲ್ಲಿ 83 ಫಲಾನುಭವಿಗಳೇ ಸ್ವತ: ಮನೆಗಳನ್ನು ನಿರ್ಮಿಸಿಕೊಳ್ಳಲು ಇಚ್ಚಿಸಿದ್ದರಿಂದ ಈ ಪೈಕಿ 65 ಫಲಾನುಭವಿಗಳಿಗೆ ಪ್ರಗತಿಗನುಗುಣಾವಾಗಿ ಇದುವರೆಗೆ ಒಟ್ಟು ರೂ.307.40 ಲಕ್ಷಗಳನ್ನು ಜಿಲ್ಲಾಧಿಕಾರಿಯವರು ನೇರವಾಗಿ ಫಲಾನುಭವಿಗಳ ಬ್ಯಾಂಕ್ ಖಾತೆಗೆ ಬಿಡುಗಡೆ ಮಾಡಿರುತ್ತಾರೆ. |

ವಇ 89 ಹೆಚ್‌ಎಎಂ 2020

(ವಿ.ಸೋಮಣ್ಣ)
ವಸತಿ ಸಚಿವರು